

بسم اللهِ الرّحمٰنِ الرّحيم

# ಹೊಸ ವರ್ಷದ ಪ್ರಾರಂಭ – ನಮ್ಮ ಜವಾಬ್ದಾರಿಕೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **01–01–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಹೊಸ ವರ್ಷದ ಮೊದಲನೆಯ ದಿನವಾಗಿದೆ. ಅನುಗ್ರಹೀತ ಜುಮುಅದ ದಿನದಲ್ಲಿ ಇದು ಪ್ರಾರಂಭವಾಗುತ್ತಿದೆ. ಸಂಪ್ರದಾಯ ಪ್ರಕಾರ ನಾವು ಒಬ್ಬರಿನ್ನೊಬ್ಬರಿಗೆ ಶುಭಾಶಯ ಕೋರುತ್ತೇವೆ. ಜಮಾಅತಿನವರಿಂದ ನನಗೆ ಸಹ ಶುಭಾಶಯ ಸಂದೇಶಗಳು ಬರುತ್ತಾ ಇವೆ. ನೀವು ಸಹ ಒಬ್ಬರಿನ್ನೊಬ್ಬರಿಗೆ ಶುಭಾಶಯ ಕೋರುತ್ತಿರಬಹುದು. ಅಭಿವೃದ್ಧಿ ಹೊಂದಿರುವುದಾಗಿ ಹೇಳಲ್ಪಡುವ ಪಶ್ಚಿಮದ ದೇಶಗಳಲ್ಲಿ ಹೊಸ ವರ್ಷ ಆರಂಭಗೊಳ್ಳುವ ರಾತ್ರಿ ಧಾರಾಳ ಮದ್ಯಪಾನ, ಕಿರುಚಾಟ, ಪಟಾಕಿಗಳ, ಬಾಣಬಿರುಸುಗಳ ಆಟ ಮೊದಲಾದವು ಗಳಿಂದ ಹೊಸ ವರ್ಷವನ್ನು ಆರಂಭಿಸಲಾಗುತ್ತಿದೆ. ಮಾತ್ರವಲ್ಲ ಈಗ ಮುಸ್ಲಿಮ್ ದೇಶಗಳಲ್ಲೂ ಸಹ ಹೊಸ ವರ್ಷವನ್ನು ಇದೇ ರೀತಿ ಸ್ವಾಗತಿಸಲಾ ಗುತ್ತಿದೆ. ಆದರೆ ಅಹ್ಮದಿಯರಲ್ಲಿ ಅಲ್ಲಾಹನ ಅನುಗ್ರಹದಿಂದ ಬಹಳ ಜನರು ಹೇಗಿದ್ದಾರೆಂದರೆ ಅವರು ರಾತ್ರಿ ಕಾಲದಲ್ಲಿ ಆರಾಧನೆಯಲ್ಲಿ ಮಗ್ನರಾದರು ಅಥವಾ ಬೆಳಗ್ಗೆ ಬೇಗನೆ ಎದ್ದು ನಫ್ಲ್ ನಮಾಝ್ ಮಾಡಿ ಹೊಸ ವರ್ಷದ ಪ್ರಥಮ ದಿನವನ್ನು ಪ್ರಾರಂಭಿಸಿದರು. ಅನೇಕ ಸ್ಥಳಗಳಲ್ಲಿ ಸಾಮೂಹಿಕವಾಗಿ ತಹಜ್ಜುದ್ ನಮಾಝ್ ಅನುಷ್ಠಿಸಿದರು. ಹೀಗಿದ್ದರೂ ನಾವು ಈ ಮುಸ್ಲಿಮರ ದೃಷ್ಟಿಯಲ್ಲಿ ಮುಸ್ಲಿಮೇತರರಾಗಿದ್ದೇವೆ. ಬೊಬ್ಬೆ ಹಾಕುವವರು, ಹಣವನ್ನು ಪೋಲು ಮಾಡುವವರು, ಅನ್ಯಧರ್ಮಗಳ ಆಚಾರಗಳನ್ನು ಬಹಳ ಶ್ರದ್ಧೆಯಿಂದ ಅನುಸರಿಸುವವರು ಮುಸ್ಲಿಮರಾಗಿದ್ದಾರೆ.

ಆದರೆ ನಾವು ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರಾಗಿದ್ದೇವೆ. ನಮಗೆ ಅದರ ಬಗ್ಗೆ ಯಾರ ಸರ್ಟಿಫಿಕೇಟಿನ ಆವಶ್ಯಕತೆಯೂ ಇಲ್ಲ. ನಾವು ಅಲ್ಲಾಹನ ದೃಷ್ಟಿಯಲ್ಲಿ ಮುಸ್ಲಿಮರಾಗಿರುವೆವು ಎಂಬ ಪ್ರಶಸ್ತಿ ಪತ್ರವನ್ನು ಅಲ್ಲಾಹನಿಂದ ಪಡೆಯಲು ಬಯಸುತ್ತೇವೆ. ನಾವು ವರ್ಷದ ಆರಂಭದ ದಿನ ಮಾತ್ರ ಏಕಾಂಗಿ ಯಾಗಿ ಅಥವಾ ಸಾಮೂಹಿಕವಾಗಿ ತಹಜ್ಜುದ್ ನಮಾಝ್ ಅನುಷ್ಠಿಸುವುದು, ದಾನಧರ್ಮ ನೀಡುವುದು, ಅಥವಾ ಬೇರೆ ಯಾವುದಾದರೂ ಸತ್ಕರ್ಮ ಮಾಡುವುದು ನಮ್ಮನ್ನು ಅಲ್ಲಾಹನ ಸಂಪ್ರೀತಿ ಗಳಿಸುವಂತೆ ಮಾಡಲು ಸಾಕಾಗಲಾರದು. ಅಲ್ಲಾಹನು ಬಯಸುವುದು ತನ್ನ ದಾಸನು ಸ್ಥಿರವಾಗಿ ಸತ್ಕರ್ಮಗಳನ್ನು ಮಾಡುತ್ತಾ ಇರಬೇಕೆಂದಾಗಿದೆ. ತನ್ನ ದಾಸನು ತನ್ನ ಆಜ್ಞೆಗಳನ್ನು ಸ್ಥಿರವಾಗಿ ಪಾಲಿಸುವವನಾಗಬೇಕೆಂದು ಅವನು ಬಯಸುತ್ತಾನೆ. ಸತ್ಕರ್ಮಗಳನ್ನು ಮಾಡುವವನೂ ನಿತ್ಯ ನಮಾಝ್‌ಗಳನ್ನೂ ತಹಜ್ಜುದ್ ನಮಾಝನ್ನೂ ಅನುಷ್ಠಿಸುವವನಾಗುವುದರ ಜೊತೆಗೆ ಹೃದಯದಲ್ಲಿ ಒಂದು ಪರಿಶುದ್ಧ ಕ್ರಾಂತಿಯನ್ನುಂಟು ಮಾಡುವವನಾಗಬೇಕು. ಆಗ ಮಾತ್ರ ಅಲ್ಲಾಹನು ಸಂಪ್ರೀತನಾಗುತ್ತಾನೆ. ಒಂದು ದಿನ ಅಥವಾ ಎರಡು ದಿನ ಮಾತ್ರ ಮಾಡುವ ಸತ್ಕರ್ಮವು ಸತ್ಕರ್ಮವಾಗಲಾರದು. ಆದುದರಿಂದ ಯಾವ ರೀತಿಯ ಕರ್ಮಗಳನ್ನು ಮಾಡಿದರೆ ನಾವು ಅಲ್ಲಾಹನ ಸಂಪ್ರೀತಿಯನ್ನು ಗಳಿಸಬಹುದು ಎಂಬುದರ ಬಗ್ಗೆ ನಾವು ಯೋಚಿಸಬೇಕಾಗಿದೆ. ಇದಕ್ಕೋಸ್ಕರ ಇಂದು ನಾನು ಈ ಕಾಲಘಟ್ಟದ ಸುಧಾರಣೆಗೆ ಅಲ್ಲಾಹನು ನಿಯೋಜಿಸಿದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲವು ಉಪದೇಶಗಳನ್ನು– ಅವರು ವಿವಿಧ ಸಂದರ್ಭಗಳಲ್ಲಿ ನೀಡಿದ ಉಪದೇಶಗಳನ್ನು– ವಿವರಿಸುವೆನು. ಜಮಾಅತಿನ ಜನರು ಸ್ಥಿರಚಿತ್ತರಾಗಿ ನಿರಂತರವಾಗಿ ಅಲ್ಲಾಹನ ಸಂಪ್ರೀತಿಗಳಿಸಲು ಪ್ರಯತ್ನಿಸುವಂತೆ ಅವು ಹೇಳುತ್ತವೆ. ಅವುಗಳನ್ನು ಅನುಸರಿಸಿದರೆ ಅವು ವರ್ಷದ ಮೊದಲ ದಿನವನ್ನು ಮಾತ್ರವಲ್ಲ ಹನ್ನೆರಡು ತಿಂಗಳನ್ನೂ ಮುನ್ನೂರ ಅರುವತ್ತೈದು ದಿನಗಳನ್ನೂ ಅನುಗ್ರಹ ಭರಿತವನ್ನಾಗಿ ಮಾಡುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದರು:

ಇಂದಿನ ಲೋಕದ ಸ್ಥಿತಿಯನ್ನೊಮ್ಮೆ ನೀವು ನೋಡಿರಿ. ನಮ್ಮ ಪ್ರವಾದಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಕೆಲಸಗಳ ಮೂಲಕ ತನ್ನ ಜೀವಿತ ಮತ್ತು ತನ್ನ ಮರಣ ಎಲ್ಲವೂ ಅಲ್ಲಾಹನಿಗೋಸ್ಕರ ವಾಗಿದೆ ಎಂದು ತೋರಿಸಿದರು. ಅಂತಹ ಮುಸ್ಲಿಮರು ಇಂದು ಲೋಕದಲ್ಲಿ ಇರುವರೇ? ಲೋಕದಲ್ಲಿರುವ ಮುಸ್ಲಿಮರಲ್ಲಿ ಯಾರೊಂದಿಗಾದರೂ 'ನೀನು ಮುಸ್ಲಿಮನಾಗಿರುವೆಯೋ?' ಎಂದು ಕೇಳಿದರೆ 'ಅಲ್‌ಹಮ್‌ದುಲಿಲ್ಲಾಹ್ ನಾನು ಮುಸ್ಲಿಮನಾಗಿದ್ದೇನೆ' ಎಂದು ಅವನು ಹೇಳುವನು. **ಲಾಇಲಾಹ ಇಲ್ಲಲ್ಲಾಹ್ ಮುಹಮ್ಮದುರ್‌ರಸೂಲುಲ್ಲಾಹ್** ಎಂಬ ಕಲಿಮ ಉಚ್ಚರಿಸುತ್ತಾನೆ. ಆದರೆ ಲೌಕಿಕ ಅಭಿಲಾಷೆಯಿಂದ ಜೀವಿಸುತ್ತಾನೆ. ಲೌಕಿಕ ಅಭಿಲಾಷೆ ಗಳೊಂದಿಗೇ ಮರಣವಾಗುತ್ತಾನೆ. ಲೌಕಿಕ ಲಾಭಗಳೇ ಅವನ ಉದ್ದೇಶ ಲಕ್ಷ್ಯಗಳಾಗಿರುತ್ತವೆ. ಹೀಗೆ ವರ್ತಿಸುವವನು ನಾನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಣೆ ಮಾಡುವವನಾಗಿದ್ದೇನೆ ಎಂದು ಹೇಳಲು ಹೇಗೆ ತಾನೆ ಸಾಧ್ಯ. ಇದು ಬಹಳ ಗಾಢವಾಗಿ ಚಿಂತಿಸಬೇಕಾದ ವಿಷಯ ವಾಗಿದೆ. ಮುಸ್ಲಿಮನಾಗುವುದು ಸುಲಭದ ಕೆಲಸವೇನೂ ಅಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸಿ ಇಸ್ಲಾಮಿನ ಮಾದರಿಯನ್ನು ತನ್ನಲ್ಲಿ ಉಂಟುಮಾಡುವ ತನಕ ಸಮಾಧಾನ ಹೊಂದಬಾರದು.

ಅವರು ಮತ್ತೂ ಹೇಳುತ್ತಾರೆ: ಅಲ್ಲಾಹನಿಗೆ ಪ್ರಿಯನಾಗುವುದು ಮನುಷ್ಯನ ಜೀವಿತದ ಪರಮ ಲಕ್ಷ್ಯವಾಗಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲಾಹನಿಗೆ ಪ್ರಿಯನಾಗದಿದ್ದರೆ ಯಶಸ್ವೀ ಜೀವಿತ ನಡೆಸಲು ಸಾಧ್ಯವಾಗದು. ಆದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯಸಂಧವಾಗಿ ಅನುಸರಿಸದೆ ಇದು ಸಾಧ್ಯವಾಗದು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಕರ್ಮಗಳ ಮೂಲಕ ಇಸ್ಲಾಮ್ ಎಂದರೆ ಏನೆಂದು ನಮಗೆ ತೋರಿಸಿಕೊಟ್ಟಿದ್ದಾರೆ. ಆದುದರಿಂದ ನೀವು ಅಲ್ಲಾಹನ ಸಂಪ್ರೀತಿ ಗಳಿಸುವವರಾಗಲು ನೀವು ನಿಮ್ಮೊಳಗೆ ಇಸ್ಲಾಮನ್ನು ಉಂಟುಮಾಡಿರಿ.

ಲೌಕಿಕ ಅನುಗ್ರಹಗಳನ್ನು ನಿಷಿದ್ಧವೆಂದು ಇಸ್ಲಾಮ್ ಹೇಳುವುದಿಲ್ಲ. ಬದಲಾಗಿ, ಲೋಕದಲ್ಲಿ ಜೀವಿಸುವಾಗ ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಸ್ಲಾಮ್ ಧರ್ಮ ಸನ್ಯಾಸವನ್ನು ನಿಷಿದ್ಧಗೊಳಿಸಿದೆ. ಅದು ಹೇಡಿಗಳ ಕೆಲಸವಾಗಿದೆ. ಓರ್ವ ಸತ್ಯವಿಶ್ವಾಸಿಯು ಲೋಕದೊಂದಿಗೆ ತನ್ನ ಸಂಬಂಧ ವಿಶಾಲಗೊಳಿಸುವಾಗ ಅದು ಅವನ ಆಧ್ಯಾತ್ಮಿಕ ಉನ್ನತಿಗೂ ಕಾರಣವಾಗುತ್ತದೆ. ಏಕೆಂದರೆ ಅವನ ಉದ್ದೇಶಲಕ್ಷ್ಯ ಧರ್ಮವಾಗಿರುತ್ತದೆ. ಅವನ ದೃಷ್ಟಿಯಲ್ಲಿ ಲೌಕಿಕ ಸಂಪತ್ತು ಮತ್ತು ಪದವಿ ಧರ್ಮದ ಸೇವಕನಾಗಿರುತ್ತದೆ. ಅವನ ಮೂಲ ಉದ್ದೇಶ ಲೌಕಿಕ ಲಾಭವಾಗಿರುವುದಿಲ್ಲ. ಅವನು ಲೌಕಿಕ ಲಾಭಗಳಿಸುವುದರ ಮೂಲ ಉದ್ದೇಶ ಧರ್ಮದ ಸೇವೆಯಾಗಿದೆ. ಆದರೆ ಲೌಕಿಕ ಸಂಪತ್ತು ಹೇಗೆ ಗಳಿಸಬೇಕೆಂದರೆ ಅದು ಉತ್ತಮ ರೀತಿಯಲ್ಲಿರಬೇಕು. ಅದು ಬೇರೆ ಮನುಷ್ಯರಿಗೆ ಕಷ್ಟ ನೀಡುವ ರೀತಿಯಲ್ಲಿರಬಾರದು. ಅದು ಜನರೆದುರಿಗೆ ನಾಚಿಕೆ ಪಡುವಂತಹ ರೀತಿಯದೂ

ಆಗಬಾರದು. ಉತ್ತಮ ರೀತಿಯಲ್ಲಿ ಸಂಪಾದಿಸಿದ ಸಂಪತ್ತು ನಿಸ್ಸಂಶಯವಾಗಿಯೂ ಪರಲೋಕ ಜೀವಿತದಲ್ಲೂ ಒಳಿತಿಗೆ ಕಾರಣವಾಗುವುದು. ಆದುದರಿಂದ ನನ್ನ ಸ್ನೇಹಿತರ (ಅಂದರೆ ಅಹ್ಮದಿಯರ) ದೃಷ್ಟಿಯಿಂದ ಈ ವಿಷಯ ಎಂದೂ ಮರೆಯಾಗಿರಬಾರದು. ಸಂಪತ್ತು, ಸಂಗಾತಿ ಮತ್ತು ಮಕ್ಕಳನ್ನು ಪ್ರೀತಿಸುವುದರಲ್ಲಿ ಉತ್ಸಾಹಗೊಂಡು ಉನ್ಮತ್ತರಾಗಿ ತಮ್ಮನ್ನು ತಾವು ಮರೆತವರಾಗಬಾರದು. ಮನುಷ್ಯನ ಮತ್ತು ಅಲ್ಲಾಹನ ಮಧ್ಯೆ ಪರದೆ ಉಂಟಾಗಬಾರದು. ಎಂದರೆ ಅಲ್ಲಾಹನಿಂದ ದೂರ ಸರಿದು ಅವನ ಸಂಬಂಧ ವಿಚ್ಛೇಧಗೊಳ್ಳುವಂತೆ ಆಗಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನನ್ನ ಹೃದಯದಲ್ಲಿ ಹೀಗೆ ತೋರಿತು: **ಅಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್, ಅರ್ರಹ್ಮಾನಿರ್ರಹೀಮ್, ಮಾಲಿಕಿಯೌಮಿದ್ದೀನ್.** ಇದರಿಂದ ಸಾಬೀತಾಗುವುದೇನೆಂದರೆ ಅಲ್ಲಾಹನ ಈ ಗುಣಗಳನ್ನು ಮನುಷ್ಯನು ತನ್ನಲ್ಲಿ ಹೊಂದಬೇಕು. ಎಂದರೆ **ರಬ್ಬುಲ್ ಆಲಮೀನ್** ಆಗಿರುವ ಅಲ್ಲಾಹನಿಗೆ ಈ ಗುಣಗಳು ಅನುಯೋಜ್ಯವಾಗಿವೆ. ಎಲ್ಲ ಸೃಷ್ಟಿ ಪ್ರಪಂಚಗಳಲ್ಲೂ ಅಲ್ಲಾಹನು **ರಹ್ಮಾನ್, ರಹೀಮ್** ಮತ್ತು **ಮಾಲಿಕಿ ಯೌಮಿದ್ದೀನ್** ಆಗಿದ್ದಾನೆ. ಮನುಷ್ಯನು **ಇಯ್ಯಾಕನಅ್‌ಬುದು** ಎಂದು ಹೇಳುವಾಗ, ಮನುಷ್ಯನು ಆರಾಧಿಸುವಾಗ, ಅಲ್ಲಾಹನ **ರುಬೂಬಿಯ್ಯತ್, ರಹ್ಮಾನಿಯ್ಯತ್** ಮತ್ತು **ರಹೀಮಿಯ್ಯತ್** ಮತ್ತು **ಮಾಲಿಕಿಯ್ಯತ್** ಎಂಬ ಗುಣಗಳ ಪ್ರತಿಬಿಂಬ ತನ್ನೊಳಗೆ ತೆಗೆದುಕೊಳ್ಳಬೇಕು. (ಎಂದರೆ ಅಲ್ಲಾಹನ ಗುಣಗಳನ್ನು ಮನುಷ್ಯನು ತನ್ನೊಳಗೆ ಅಳವಡಿಸಬೇಕು). ಮನುಷ್ಯನು ಅಲ್ಲಾಹನ ಪರಿಪೂರ್ಣ ದಾಸನಾಗಬೇಕಾದರೆ **ತಖಲ್ಲಖೂ ಬಿ ಅಖ್‌ಲಾಖಿಲ್ಲಾಹ್** ಅಲ್ಲಾಹನ ಸ್ವಭಾವಗುಣಗಳ ಬಣ್ಣ ಹೊಂದಿರಿ. ಎಂಬ ಆಜ್ಞೆ ಪಾಲಿಸಬೇಕು.... ಈ ಪದವಿ ಗಳಿಸುವ ತನಕ ಪರಿಶ್ರಮಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮೃತ್ಯುವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಲೋಕ ಮತ್ತು ಲೌಕಿಕ ವಸ್ತುಗಳ ಬಗ್ಗೆ ಅತ್ಯಾಶೆ ಹೊಂದಿ ಮೃತ್ಯು ಆಸನ್ನವಾದಾಗ ಅವುಗಳನ್ನು ಬಿಟ್ಟು ಹೋಗುವ ಬಗ್ಗೆ ಸಂಕಟಪಡುವಂತೆ ಆಗಬಾರದು. ಇದೇ ಸಾತ್ವಿಕತೆಯಾಗಿದೆ. ಮನುಷ್ಯನಿಗೆ ಮೃತ್ಯುವಿನ ನೆನಪಿರುವಾಗ ಸತ್ಕರ್ಮ ಮಾಡಲು ಪ್ರಯತ್ನ ಮಾಡುವನು. ಆಟವಿನೋದಗಳಿಗೆ ಅನಾವಶ್ಯಕ ಖರ್ಚು ಮಾಡಲಾರನು. ಸಮಯವನ್ನು ಹಾಳುಮಾಡಲಾರನು. ಅನಾವಶ್ಯಕ ಆಶೆಗಳನ್ನು ಈಡೇರಿಸಲು ಸಂಪತ್ತನ್ನು ನಾಶಮಾಡಲಾರನು.

ಪರಿಶುದ್ಧ ಪರಿವರ್ತನೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ನಿರ್ಭಯರಾಗಿರಬೇಡಿರಿ. ಯಾವಾಗಲೂ ಇಸ್ತಿಗ್‌ಫಾರ್ ಮತ್ತು ಇತರ ಪ್ರಾರ್ಥನೆಗಳನ್ನು ಮಾಡಿರಿ. ನಿಮ್ಮಲ್ಲಿ ಪರಿಶುದ್ಧ ಪರಿವರ್ತನೆ ಉಂಟುಮಾಡಿರಿ. ನೀವು ನಿರ್ಲಕ್ಷ್ಯರಾಗಿ ಜೀವಿಸಬೇಡಿರಿ. ನಿಮ್ಮ ಆಯುಸ್ಸು ದೀರ್ಘವಾಗಿರುವುದು ಎಂದು ನಿಮ್ಮ ಮನಸ್ಸು ನಿಮಗೆ ಸುಳ್ಳು ಸಾಂತ್ವನ ನೀಡುತ್ತದೆ. ನೀವು ಮೃತ್ಯುವನ್ನು ಅದು ಸಮೀಪವಾಗಿದೆ ಎಂದು ಭಾವಿಸಿರಿ. ದೇವನಿರುವುದು ಸತ್ಯವಾಗಿದೆ. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕನ್ನು ಬೇರೆಯವನಿಗೆ ಕೊಡುವವನು ಅಪಮಾನಿತನಾಗಿ ಮರಣ ಹೊಂದುವನು.

ಪರಿಶುದ್ಧ ಬದಲಾವಣೆ ಮತ್ತು ಪರಲೋಕದ ಬಗ್ಗೆ ಚಿಂತೆ ಉಂಟಾಗುವುದು ತಖ್ವದ ಮೂಲಕವಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ತಖ್ವ ಹೊಂದಿದವರ ಮೇಲೆ ಅಲ್ಲಾಹನ ಒಂದು ಪ್ರಕಾಶ ಇರುತ್ತದೆ. ಅವನು ಅಲ್ಲಾಹನ ನೆರಳಿನಲ್ಲಿರುತ್ತಾನೆ. ಆದರೆ ತಖ್ವ ಶುದ್ಧವಾಗಿರಬೇಕು. ಅದರಲ್ಲಿ ಶೈತಾನನ ಸ್ವಲ್ಪ ಅಂಶವೂ ಇರಬಾರದು. ಮುಖ್ಯವಾದುದು ತಖ್ವ ಎಂದು ನೆನಪಿಟ್ಟುಕೊಳ್ಳಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಆದುದರಿಂದ ನೀವು ಇಲ್‌ಹಾಂ ಮತ್ತು ಸ್ವಪ್ನಗಳ ಹಿಂದೆ ಬೀಳಬೇಡಿರಿ. ಒಬ್ಬನಿಗೆ ಇಲ್‌ಹಾಮ್ ದೊರಕಿದೆ, ಸತ್ಯ ಸ್ವಪ್ನಗಳನ್ನು ಕಂಡಿದ್ದಾನೆ. ಅವನಿಗೆ ಕಶ್‌ಫ್ ಆಗಿದೆ ಎಂದೆಲ್ಲಾ ಯೋಚಿಸಬೇಡಿರಿ. ನೀವು ತಖ್ವ ಗಳಿಸುವ ಮಾರ್ಗವನ್ನು ಹಿಂಬಾಲಿಸಿರಿ. ಒಬ್ಬನಿಗೆ ಸತ್ಯ ಸ್ವಪ್ನಗಳು ಕಾಣಿಸುತ್ತವೆ ಅಥವಾ ಕಾಣಿಸುವುದಿಲ್ಲ ಎನ್ನುವುದನ್ನು ನೋಡಬೇಡಿರಿ. ಅವನಲ್ಲಿ ತಖ್ವ ಇದೆಯೋ ಇಲ್ಲವೋ ಎಂದು ಮಾತ್ರ ನೋಡಿರಿ. ಒಬ್ಬನು ಮುತ್ತಖಿಯಾಗಿದ್ದರೆ ಅವನ ಇಲ್‌ಹಾಮ್‌ಗಳು ಸತ್ಯವಾಗಿರುತ್ತವೆ. ಆದರೆ ತಖ್ವ ಇಲ್ಲದವನ ಇಲ್‌ಹಾಮ್‌ಗಳು ವಿಶ್ವಾಸಾರ್ಹವಾಗಲಾರವು. ಆದುದರಿಂದ ತಖ್ವದ ಪರೀಕ್ಷೆಯಲ್ಲಿ ಜಯಶಾಲಿಯಾಗಲು ಪ್ರತಿಯೊಂದು ರೀತಿಯ ಕಷ್ಟ ಅನುಭವಿಸಲು ಸಿದ್ಧನಾಗಬೇಕು. ತಖ್ವ ಕೂಡ ಒಂದು ಪರೀಕ್ಷೆಯಾಗಿದೆ. ಅದರಲ್ಲಿ ಜಯಗಳಿಸಲು ಪ್ರಯತ್ನದ ಅಗತ್ಯವಿದೆ. ಮನುಷ್ಯನು ತಖ್ವದ ಮಾರ್ಗದಲ್ಲಿ ಚಲಿಸುವಾಗ ಶೈತಾನನು ದೊಡ್ಡ ದೊಡ್ಡ ಆಕ್ರಮಣಗಳನ್ನು ಮಾಡುತ್ತಾನೆ. ಆದರೆ ಒಂದು ಹಂತವನ್ನು ತಲಪುವಾಗ ಶೈತಾನನು ನಿಂತು ಬಿಡುತ್ತಾನೆ. ಆ ಸಮಯದಲ್ಲಿ ಮನುಷ್ಯನ ಲೌಕಿಕ ಜೀವಿತದಲ್ಲಿ ಒಂದು ಮೃತ್ಯು ಸಂಭವಿಸಿ ಅವನು ಅಲ್ಲಾಹನ ನೆರಳಿನಡಿಯಲ್ಲಿರುತ್ತಾನೆ. ಆಗ ಅವನು **ಮಝ್‌ಹರೇ ಇಲಾಹೀ** (ದೇವನನ್ನು ಪ್ರಕಟಿಸುವವ) ಮತ್ತು **ಖಲೀಫತುಲ್ಲಾಹ್** (ಅಲ್ಲಾಹನ ಪ್ರತಿನಿಧಿ) ಆಗುತ್ತಾನೆ. ಒಟ್ಟಿನಲ್ಲಿ ನಮ್ಮ ಉಪದೇಶದ ಸಂಕ್ಷಿಪ್ತ ರೂಪ ಇದಾಗಿದೆ: ಮನುಷ್ಯನು ತನ್ನ ಎಲ್ಲ ಶಕ್ತಿಗಳನ್ನು ಅಲ್ಲಾಹನ ಕಡೆಗೆ ಇರಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಖ್ವದ ಬಗ್ಗೆ ಉಪದೇಶಿಸುತ್ತಾ ಹೇಳಿದರು: ತಖ್ವದ ಒಂದು ಶರತ್ತೇನೆಂದರೆ ಬಡತನದಿಂದಲೂ ನಿರಾಡಂಬರತೆಯಿಂದಲೂ ಜೀವಿಸಬೇಕು. ಅನಾವಶ್ಯಕ ಕೋಪವನ್ನು ಎದುರಿಸುವುದು ಸಹ ತಖ್ವದ ಒಂದು ಶಾಖೆಯಾಗಿದೆ. ನಮ್ಮಲ್ಲಿ ಉಂಟಾಗುವ ಅನಾವಶ್ಯಕ ಕೋಪವನ್ನು, ಮತ್ತು ನಮ್ಮ ವಿರುದ್ಧ ಅನಾವಶ್ಯಕವಾಗಿ ಕೋಪಿಸುವವರನ್ನು ತಖ್ವದ ಮೂಲಕವೇ ನಾವು ಎದುರಿಸಬೇಕಾಗಿದೆ. ದೊಡ್ಡ ದೊಡ್ಡ ಜ್ಞಾನಿಗಳಿಗೆ ಮತ್ತು ಸತ್ಯಸಂಧರಿಗೆ ತಲಪಬೇಕಾಗಿದ್ದ ಕೊನೆಯ ತಾಣ ಕೋಪದಿಂದ ರಕ್ಷಣೆ ಪಡೆಯುದಾಗಿದೆ. ಕೆಲವರು ಗಣ್ಯರೊಂದಿಗೆ ಬಹಳ ಗೌರವದಿಂದ ವರ್ತಿಸುತ್ತಾರೆ. ಆದರೆ ಬಡವನ ಮಾತನ್ನು ಶ್ರದ್ಧೆಯಿಂದ ಆಲಿಸುವವನೇ ದೊಡ್ಡ ವ್ಯಕ್ತಿಯಾಗಿದ್ದಾನೆ. ಬಡವನೊಂದಿಗೆ ಮಾತನಾಡುವಾಗ ಅವನಿಗೆ ನೋವಾಗದಂತೆ ಜಾಗ್ರತೆ ವಹಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: **ವಲಾ ತನಾಬಝೂ ಬಿಲ್ ಅಲ್‌ಖಾಬ್, ಬಿಅ್‌ಸಲ್ ಇಸ್‌ಮುಲ್ ಫುಸೂಖು ಬಅ್‌ದಲ್ ಈಮಾನಿ ವ ಮನ್‌ಲಮ್ ಯತುಬ್ ಫಉಲಾಯಿಕ ಹುಮುಝ್ಝಾಲಿಮೂನ್.** ನೀವು ಪರಸ್ಪರ ವಿಕೃತ ನಾಮದಿಂದ ಕರೆಯಬೇಡಿರಿ. ಸತ್ಯವಿಶ್ವಾಸ ಹೊಂದಿದ ಬಳಿಕ ಅಪಕೀರ್ತಿಗೆ ಈಡಾಗುವುದು (ನಿಜವಾಗಿಯೂ) ಕೆಟ್ಟದ್ದಾಗಿದೆ. ಯಾರು ಪಶ್ಚಾತ್ತಾಪಪಡುವುದಿಲ್ಲವೋ ಅವರೇ ಅಧರ್ಮಿಗಳು. (49: 12) ಅಲ್ಲಾಹನ ದೃಷ್ಟಿಯಲ್ಲಿ ಮುತ್ತಖಿಯಾದವನೇ ಗೌರವಾರ್ಹನಾಗಿದ್ದಾನೆ. **ಇನ್ನ ಅಕ್‌ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್ ಇನ್ನಲ್ಲಾಹ ಅಲೀಮುನ್ ಖಬೀರ್** ಎಂದು ಅಲ್ಲಾಹನು ಹೇಳಿದ್ದಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಇಹಲೋಕದಲ್ಲೂ ಪರಲೋಕದಲ್ಲೂ ನೀವು ಜಯಗಳಿಸಲು ಬಯಸುವುದಾದರೆ ಮತ್ತು ಜನರ ಹೃದಯಗಳನ್ನು ಜಯಿಸಲು ಬಯಸುವುದಾದರೆ ನೀವು ಪರಿಶುದ್ಧತೆಯನ್ನು ಅವಲಂಬಿಸಿರಿ. ಬುದ್ಧಿಯನ್ನು ಬಳಸಿರಿ ಮತ್ತು ಅಲ್ಲಾಹನ ವಚನದಿಂದ ಮಾರ್ಗದರ್ಶನ ಪಡೆಯಿರಿ. ನೀವು ಸ್ವತಃ ಸದ್ಗುಣಗಳನ್ನು ಹೊಂದಿರಿ ಮತ್ತು ಅನ್ಯರಿಗೆ ನಿಮ್ಮ ಸದ್ಗುಣಗಳ ಉದಾಹರಣೆ ತೋರಿಸಿರಿ. ಆಗ ನೀವು ಖಂಡಿತವಾಗಿಯೂ ಜಯಶಾಲಿಗಳಾಗುವಿರಿ.

ಅನ್ಯರಿಗೆ ಉಪದೇಶಿಸುವ ಮೊದಲು ಸ್ವತಃ ನೀವು ಅದನ್ನು ಮಾಡಿ ತೋರಿಸಿರಿ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಜನರು ಹೇಳುವ ಮೊದಲೇ ಸ್ವತಃ ಅದನ್ನು ಮಾಡುವವರಾ

ಗಿದ್ದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ **ಲಿಮ ತಖೂಲೂನ ಮಾ ಲಾ ತಫ್‌ಅಲೂನ್**. (ನೀವು ಮಾಡದೆ ಇರುವುದನ್ನು ಏಕೆ ಹೇಳುತ್ತೀರಿ) ಎಂದು ಹೇಳುವ ಆವಶ್ಯಕತೆ ಇರಲಿಲ್ಲ. ಪವಿತ್ರ ಖುರ್‌ಆನಿನ ಈ ವಚನ ಸೂಚಿಸುವುದೇನೆಂದರೆ ಹೇಳಿದ ಹಾಗೆ ಸ್ವತಃ ಮಾಡದವರು ಈ ಲೋಕದಲ್ಲಿ ಹಿಂದೆ ಇದ್ದರು ಈಗ ಇದ್ದಾರೆ ಮತ್ತು ಮುಂದೆ ಸಹ ಇರುವರು ಎಂದಾಗಿದೆ.

ಆದುದರಿಂದ ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸುವುದಕ್ಕೆ ಸಂಬಂಧಿಸಿ ಈ ವಿಷಯದ ಬಗ್ಗೆ ಸಹ ನಾವು ಶ್ರದ್ಧೆ ನೀಡಬೇಕಾಗಿದೆ. ಈ ಉಪದೇಶ ಪ್ರಕಾರ ನಾವು ನಮ್ಮ ವರ್ತನೆಗಳನ್ನು ಸ್ವತಃ ಪರಿಶೀಲಿಸಬೇಕು. ಈ ಉಪದೇಶವನ್ನು ಜಮಾಅತಿನ ಹುದ್ದೇದಾರರು ವಿಶಿಷ್ಟವಾಗಿ ಗಮನಿಸಬೇಕು. ಅನ್ಯರು ತಮ್ಮಲ್ಲಿ ಬದಲಾವಣೆ ಉಂಟುಮಾಡಬೇಕೆಂದು ಉಪದೇಶಿಸುವವರು ತಮ್ಮ ವರ್ತನೆಯನ್ನು ಸುಧಾರಣೆ ಮಾಡುವುದಿಲ್ಲ. ಅಥವಾ ಏನಾದರೂ ನೆವನಗಳನ್ನು ಹೇಳುತ್ತಾ ಅವರು ಅಲ್ಲಾಹನ ಆಜ್ಞೆಗಳಿಗೂ ಅಲ್ಲಾಹನ ಸಂದೇಶ ವಾಹಕರ ಆಜ್ಞೆಗಳಿಗೂ ದ್ವಿತೀಯ ಸ್ಥಾನ ನೀಡುತ್ತಾರೆ. ಇಂತಹ ಅನೇಕ ಉದಾಹರಣೆಗಳು ನಮ್ಮ ಮುಂದೆ ಬಂದಿವೆ.

ಮಾತು ಮತ್ತು ಕೃತ್ಯದಲ್ಲಿ ಸಮನ್ವಯತೆಯ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಿವು ನನ್ನ ಮಾತು ಆಲಿಸಿರಿ ಮತ್ತು ಚೆನ್ನಾಗಿ ನೆನಪಿಟ್ಟುಕೊಳ್ಳಿರಿ. ಮನುಷ್ಯನು ಸತ್ಯವಾದ ಹೃದಯದಿಂದ ಮಾತನಾಡುವುದಿಲ್ಲವಾದರೆ ಮತ್ತು ಅವನು ಮಾತಿನಂತೆ ನಡೆಯುವುದಿಲ್ಲ ವಾದರೆ ಅವನು ಪ್ರಭಾವಶಾಲಿಯಾಗಲಾರನು.

ಮತ್ತೆ ಪರಸ್ಪರ ಭ್ರಾತೃಭಾವ, ಐಕ್ಯತೆ ಮತ್ತು ಪ್ರೀತಿಯ ಬಗ್ಗೆ ಉಪದೇಶಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ಜಮಾಅತ್‌ನಲ್ಲಿ ಪರಸ್ಪರ ಐಕ್ಯತೆ ಮತ್ತು ಪ್ರೀತಿ ಬಗ್ಗೆ ನಾನು ಈಗಾಗಲೇ ಅನೇಕ ಸಾರಿ ಹೇಳಿದ್ದೇನೆ. ನೀವು ಐಕ್ಯತೆಯಿಂದ ವರ್ತಿಸಿರಿ, ಸಾಮೂಹಿಕವಾಗಿ ವರ್ತಿಸಿರಿ ಎಂದು. ಅಲ್ಲಾಹನು ಮುಸ್ಲಿಮರೊಂದಿಗೆ ನೀವು ಒಂದೇ ಶರೀರದ ಹಾಗೆ ಆಗಿರಿ, ಹಾಗೆ ಆಗದಿದ್ದರೆ ನಿಮ್ಮ ಶಕ್ತಿ ಗುಂದುವುದು ಎಂದು ಹೇಳಿದ್ದಾನೆ. ನಮಾಝ್ ಮಾಡುವಾಗ ಒಬ್ಬರಿನ್ನೊಬ್ಬರೊಂದಿಗೆ ತಾಗಿ ನಿಲ್ಲಲು ಹೇಳಿದುದು ನಿಮ್ಮಲ್ಲಿ ಐಕ್ಯತೆ ಉಂಟಾಗಲಿಕ್ಕಾಗಿದೆ. ಆಗ ವಿದ್ಯುಚ್ಛಕ್ತಿಯ ಹಾಗೆ ಒಬ್ಬನ ಒಳಿತು ಇನ್ನೊಬ್ಬನೊಳಗೆ ಹರಿಯುವುದು. ಭಿನ್ನಾಭಿಪ್ರಾಯವೂ ಅನೈಕ್ಯತೆಯೂ ತಲೆ ದೋರಿದರೆ ನೀವು ದುರದೃಷ್ಟಶಾಲಿಗಳಾಗುವಿರಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ನನ್ನ ಮೂಲಕ ಇನ್‌ಶಾಅಲ್ಲಾಹ್ ಸಾತ್ವಿಕರ ಒಂದು ಜಮಾಅತ್ ಸ್ಥಾಪಿತವಾಗುವುದು. ಪರಸ್ಪರ ವಿರೋಧದ ಕಾರಣಗಳು ಯಾವುವು? ಜಿಪುಣತನ, ಅಹಂಭಾವ, ಸ್ವಂತಇಷ್ಟ ಮತ್ತು ಉದ್ವೇಗಗಳಾಗಿವೆ. (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ನೋವಿನೊಂದಿಗೆ ಹೇಳುತ್ತಾರೆ:) ಅಂತಹ ಜನರನ್ನು ಎಂದರೆ ಜಿಪುಣರಾಗಿರುವವರನ್ನು, ಅಹಂಭಾವದಿಂದ ವರ್ತಿಸುವವರನ್ನು, ಸ್ವಂತ ಇಷ್ಟ ಪ್ರಕಾರ ವರ್ತಿಸುವ ಜನರನ್ನು ಮತ್ತು ತಮ್ಮ ಉದ್ವೇಗಗಳನ್ನು ನಿಯಂತ್ರಿಸದವರನ್ನು ಮತ್ತು ಪರಸ್ಪರ ಪ್ರೀತಿಯಿಂದಲೂ ಭ್ರಾತೃಭಾವದಿಂದಲೂ ವರ್ತಿಸದವರನ್ನು ಜಮಾಅತಿನಿಂದ ಹೊರಗೆ ಹಾಕುವೆನು. ಇಂತಹ ಜನರು ತಮ್ಮ ಸ್ವಭಾವ ಬದಲಾಯಿಸಿ ಕೊಳ್ಳದಿದ್ದರೆ ಕೆಲವು ದಿನಗಳ ಅತಿಥಿಗಳಾಗಿ ಮಾತ್ರ ಉಳಿಯುವರು. ನಾನು ಯಾರ ಕಾರಣದಿಂದಲೂ ಆಕ್ಷೇಪಿಸಲ್ಪಡಲು ಇಚ್ಛಿಸುವುದಿಲ್ಲ. ನನ್ನ ಇಚ್ಛೆಯ ಪ್ರಕಾರ ವರ್ತಿಸದೆ ನನ್ನ ಜಮಾಅತ್‌ನಲ್ಲಿ ಇರುವವನು ಒಣಗಿದ ಕೊಂಬೆಯ ಹಾಗಿದ್ದಾನೆ. ತೋಟಗಾರನು ಅದನ್ನು ಕಡಿಯದೆ ಬಿಡುವುದು ಹೇಗೆ.? ಒಣಗಿದ ಕೊಂಬೆ ಹಸಿಕೊಂಬೆಯ ಜೊತೆಗೆ ಇದ್ದರೆ ಅದು ನೀರನ್ನು ಹೀರುವುದು. ಆದರೆ ಅದು ಎಂದೂ ಹಸಿರಾಗದು. ಅದು ಇತರ ಕೊಂಬೆಗಳನ್ನೂ ಒಣಗಿಸುವುದು.

ಪ್ರಾರ್ಥನೆಗಳ ಅಂಗೀಕಾರದ ಶರತ್ತುಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೀವು ಶ್ರದ್ಧೆಯಿಂದ ಆಲಿಸಬೇಕು. ಪ್ರಾರ್ಥನೆ ಅಂಗೀಕಾರ ಪಡೆಯಲು ಕೆಲವು ಶರತ್ತುಗಳಿವೆ. ಅವುಗಳಲ್ಲಿ ಕೆಲವು ಪ್ರಾರ್ಥನೆ ಮಾಡುವವನಿಗೆ ಸಂಬಂಧಿಸಿದೆ. ಇನ್ನು ಕೆಲವು ಪ್ರಾರ್ಥನೆ ಮಾಡಿಸುವವನಿಗೆ ಸಂಬಂಧಿಸಿವೆ. ಪ್ರಾರ್ಥನೆ ಮಾಡಿಸುವವನು ಅಲ್ಲಾಹನ ಭಯ ಹೊಂದಿಕೊಂಡು ಅಲ್ಲಾಹನು ಸ್ವಯಂಪೂರ್ಣನಾಗಿ ತನ್ನಿಷ್ಟ ಪ್ರಕಾರ ವರ್ತಿಸುವವನೆಂಬ ಭಯ ಹೊಂದಿರಬೇಕು. ಅಲ್ಲಾಹನ ತೀರ್ಮಾನದ ಬಗ್ಗೆ ತೃಪ್ತಿಯನ್ನು ಹೊಂದಿ ಅವನನ್ನು ಆರಾಧಿಸಬೇಕು. ತಖ್ವ ಮತ್ತು ಸತ್ಯಸಂಧತೆ ಯಿಂದ ಅಲ್ಲಾಹನ ಪ್ರೀತಿ ಗಳಿಸಬೇಕು. ಇಂತಹ ಸ್ಥಿತಿಯಲ್ಲಿ ಪ್ರಾರ್ಥನೆ ಅಂಗೀಕಾರಗೊಳ್ಳುವ ಬಾಗಿಲು ತೆರೆಯಲ್ಪಡುತ್ತದೆ.

ಪ್ರಾರ್ಥನೆಗಳು ಸ್ವೀಕರಿಸಲ್ಪಡಲು ತಖ್ವ ಹೊಂದುವುದು ಅನಿವಾರ್ಯ ಶರತ್ತಾಗಿರುವಾಗ ನಿರ್ಲಕ್ಷ್ಯನೂ ದಾರಿತಪ್ಪಿದವನೂ ಆದವನು ತನ್ನ ಪ್ರಾರ್ಥನೆ ಅಂಗೀಕರಿಸಲ್ಪಡಬೇಕೆಂದು ಇಚ್ಛಿಸುವುದು ಅವಿವೇಕತನವಲ್ಲದೆ ಇನ್ನೇನು? ಆದುದರಿಂದ ನಮ್ಮ ಜಮಾಅತಿನ ಪ್ರತಿಯೊಬ್ಬರೂ ಯಾವಾಗಲೂ ತಖ್ವದ ಮಾರ್ಗದಲ್ಲಿ ಹೆಜ್ಜೆ ಹಾಕಬೇಕು. ಹಾಗೆ ಮಾಡಿದರೆ ಪ್ರಾರ್ಥನೆಯ ಅಂಗೀಕಾರದ ಸಂತೋಷ ಸೌಭಾಗ್ಯವನ್ನು ಗಳಿಸುವರು ಮತ್ತು ಅವರ ವಿಶ್ವಾಸವೂ ವರ್ಧಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅಪೇಕ್ಷೆ ಪ್ರಕಾರ ಜೀವಿಸುವ ಭಾಗ್ಯವನ್ನು ಅಲ್ಲಾಹನು ನಮಗೆ ಕರುಣಿಸಲಿ. ನಮ್ಮ ಹೆಜ್ಜೆಗಳು ಪ್ರತಿ ಕ್ಷಣ ಒಳಿತಿನ ಕಡೆಗೆ ಸಾಗುವವುಗಳಾಗಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳಿಗೆ ವಾರೀಸುದಾರರಾಗುವವರಾಗಲಿ. ಈ ಪ್ರಾರ್ಥನೆಯೊಂದಿಗೆ ನಾನು ನಿಮಗೆಲ್ಲರಿಗೂ ಹೊಸ ವರ್ಷದ ಶುಭಾಶಯ ನೀಡುತ್ತೇನೆ. ಈ ವರ್ಷ ನಮಗೆಲ್ಲರಿಗೂ ವೈಯಕ್ತಿಕ ವಾಗಿಯೂ ಸಾಮೂಹಿಕವಾಗಿಯೂ ಅಸಂಖ್ಯಾತ ಅನುಗ್ರಹಗಳನ್ನು ಅಲ್ಲಾಹನು ದಯಪಾಲಿಸಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 01-01-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon